# ಕರ್ನಾಟಕ ಸರ್ಕಾರ

ಸಂ.SFS-5/ರಿಬಿವಿ/ಮಾ.ಸೂ/ಹಿಂಬೇ/2015-16/2015-16

ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ 05-09-2015

## ಸುತ್ತೋಲೆ - 1

ವಿಷಯ:- 2015-16ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬಗ್ಗೆ.

ಉಲ್ಲೇಖ:- ದಿನಾಂಕ: 04-09-2015 ರಂದು ಡಾ.ಬಿ.ಎಮ್. ಖಾದಿ, ಶಿಕ್ಷಣಾ ನಿರ್ದೇಶಕರು, ಕೃ.ವಿ.ವಿ., ಧಾರವಾಡ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

***

2015-16ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಇಲಾಖೆಯ ವತಿಯಿಂದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗಾಗಿ ಅನುಷ್ಠಾನಗೊಳಿಸಲಾಗುವ **ಬೀಜಗಳ ಪೂರೈಕೆ ಹಾಗೂ ಇತರೆ ಹೂಡುವಳಿ ಯೋಜನೆಗಳಡಿ (ಲೆಕ್ಕ ಶೀರ್ಷಿಕೆ: 2401-00-103-0-15)** ಬಿತ್ತನೆ ಬೀಜ ವಿತರಿಸುವ ಬಗ್ಗೆ ಗೋದಿ, ಕುಸುಬೆ, ರಾಗಿ, ಹಿಂಗಾರು ಜೋಳ, ಹೈ.ಜೋಳ, ಮೆಕ್ಕೆಜೋಳ, ಹೆಸರು, ಉದ್ದು, ಅಲಸಂದೆ ಮತ್ತು ಸೂರ್ಯಕಾಂತಿ ಬೆಳೆಗಳ ಬಿತ್ತನೆ ಬೀಜ ಪೂರೈಸಲು ಅನುಮೋದಿತ ಸಂಸ್ಥೆಗಳು, ದೊರೆಯುವ ಪ್ರಮಾಣ ಮತ್ತು ಪ್ರತಿ ಕ್ವಿಂಟಾಲ್ ದರದ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. ಬೆಳೆವಾರು ನೀಡಬಹುದಾದ ರಿಯಾಯಿತಿ ದರ (ಪ್ರತಿ ಕೆ.ಜಿ.ಗೆ), ಹಿಂಗಾರು/ಬೇಸಿಗೆ ಹಂಗಾಮಿನ ಟೆಂಡರ್‌ದಾರರ MOU ಸಂಸ್ಥೆಗಳ ವಿವರ ಮತ್ತು ಬೀಜ ಪೂರೈಕೆ ಸಂಸ್ಥೆಗಳ ವಿಳಾಸವನ್ನು ಅನುಕ್ರಮವಾಗಿ ಅನುಬಂಧ-2, 3 ಮತ್ತು 4 ರಲ್ಲಿ ನೀಡಿದೆ.

ಪ್ರಮಾಣಿತ ಬಿತ್ತನೆ ಬೀಜಗಳನ್ನು ಹಾಗೂ ನಿಜಚೀಟಿ ಬಿತ್ತನೆ ಬೀಜಗಳನ್ನು ಬೀಜಗಳ ಪೂರೈಕೆ ಹಾಗೂ ಇತರೆ ಹೂಡುವಳಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಅಥವಾ ಅವರ ಹಿಡುವಳಿ ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಸೀಮಿತಗೊಳಿಸಿ ಬಿತ್ತನೆ ಬೀಜ ವಿತರಿಸುವುದು.

NFSM ಮತ್ತು NMOOP ಯೋಜನೆಗಳ ಮಾರ್ಗಸೂಚಿಯ ಪ್ರಕಾರ ಬಿತ್ತನೆ ಬೀಜಗಳನ್ನು ವಿತರಿಸಬಹುದಾಗಿರುತ್ತದೆ.

ಪ್ರಸ್ತುತ ಬಿತ್ತನೆ ಬೀಜ ವಿತರಣೆ ಬಗ್ಗೆ 2015ರ ಮುಂಗಾರು ಹಂಗಾಮಿನಲ್ಲಿ ನೀಡಲಾಗಿರುವ ಮಾರ್ಗಸೂಚಿ ಅಂಶಗಳಂತೆ ರೈತರಿಗೆ ಬಿತ್ತನೆ ಬೀಜ ವಿತರಿಸಲು ಕ್ರಮ ಕೈಗೊಳ್ಳುವುದು. ಈ ಬಗ್ಗೆ ವಿವರವಾದ ಮಾರ್ಗಸೂಚಿಯನ್ನು ಮುಂದೆ ತಿಳಿಸಲಾಗುವುದು.

ಕೃಷಿ ನಿರ್ದೇಶಕರು

1. ಪ್ರತಿಯನ್ನು ವಂದನಾಪೂರ್ವಕವಾಗಿ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ವಂದನಾಪೂರ್ವಕವಾಗಿ ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ರವಾನಿಸಿದೆ.
3. ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಪ್ರತಿಯನ್ನು ಅನುಮೋದಿತ ಎಲ್ಲಾ ಬಿತ್ತನೆ ಬೀಜ ಸರಬರಾಜು ಸಂಸ್ಥೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.